
ಆಧ್ಯಾತ್ಮಿಕ ಅನುಭೂತಿ, ಜಿಜ್ಞಾಸೆ, ದೃಢೀಕರಣಗಳು ಇಲ್ಲಿವೆ. ಐತಿಹಾಸಿಕತೆಯ ಎಲ್ಲೆಯಾಚೆ ಹೊರಳುವ ಅಗತ್ಯ, ಅನಿವಾರ್ಯತೆಯನ್ನು ತರ್ಕಬದ್ಧ ಭಾಷೆಯಲ್ಲೇ ಅವರು ತಿಳಿಸಿ ಕೊಡುತ್ತಾರೆ.

## ತಾತ್ತ್ವಿಕತೆ ಮತ್ತು ಆಧ್ಯಾತ್ಮಿಕ ಭಾವನೆಗಳು

ಮನುಷ್ಯನ ಸತ್ಯಾನ್ವೇಷಣೆ ಎಂದು ಆರಂಭಗೊಂಡಿತು ಎಂಬುದಕ್ಕೆ ಯಾವುದೇ ಸ್ಪಷ್ಟ ಉತ್ತರವಿಲ್ಲದಿದ್ದರೂ, ಲಭ್ಯವಿರುವ ಚಾರಿತ್ರಿಕ ದಾಖಲೆಗಳ ಮೂಲಕ ಅವನ ಬೌದ್ಧಿಕ ಚಟುವಟಿಕೆ ಹಾಗೂ ಬೆಳವಣಿಗೆಯ ಕ್ರಮವನ್ನು ಕಂಡುಕೊಳ್ಳಬಹುದಾಗಿದೆ. ಪ್ರಾಚೀನ ಕೃತಿಗಳಲ್ಲಿ ಕಂಡುಬರುವ ಸತ್ಯಾನ್ವೇಷಣೆ ಮಾನವ ಮನಸ್ಸಿನ ಕುತೂಹಲ, ಅಚ್ಚರಿ, ಬೆರಗಿನ ಚಿಂತನೆಗಳನ್ನು ಪ್ರತಿಬಿಂಬಿಸುತ್ತವೆ. ಕ್ರಮೇಣ ಇದು ತರ್ಕ, ಜಿಜ್ಞಾಸೆ, ವಾದ–ಪ್ರತಿವಾದ, ಕೊನೆಗೆ ಸೂಕ್ಷ್ಮ ವಿಶ್ಲೇಷಣೆಯ ಹಂತವನ್ನು ತಲುಪಿ, ಮಾನವನ ಬೌದ್ಧಿಕಲೋಕದ ಅದ್ಭುತವೆನ್ನಬಹುದಾದ ಅತಿಶ್ರೇಷ್ಠ ತತ್ತ್ವಜ್ಞಾನಗಳಾಗಿ ಮಾರ್ಪಟ್ಟವು. ಆದರೆ ಭಾರತೀಯ ದಾರ್ಶನಿಕತೆಯ ವಿಶಿಷ್ಟ ಲಕ್ಷಣವೆನ್ನಬಹುದಾದ ಅದರ ಆಧ್ಯಾತ್ಮಿಕ ಆಯಾಮವು, ಸತ್ಯಾನ್ವೇಷಣೆ ಒಂದು ಆಧ್ಯಾತ್ಮಿಕ ಕ್ರಿಯೆಯೂ, ಅದೇ ಕಾಲಕ್ಕೆ ಅದೊಂದು ಬೌದ್ಧಿಕ ಕ್ರಿಯೆಯೂ ಆಗುವಂತೆ ಮಾಡಿತು. ಭಗವಂತನೆಂದರೆ ವ್ಯಕ್ತಿಯಲ್ಲ, ಅದೊಂದು ತತ್ತ್ವ; ಎಲ್ಲ ನಾಮರೂಪಗಳನ್ನೂ, ಘನ ವಸ್ತುಗಳ ಪ್ರಪಂಚವನ್ನೂ ಮೀರಿದ ನಿರ್ಗುಣ ನಿರಾಕಾರ ಅಸ್ತಿತ್ವ. ಪ್ರಪಂಚ, ಜೀವಜಲ ಮನೋವ್ಯಾಪಾರ ಇವೆಲ್ಲವೂ ಆ ಭಗವಂತನಿಂದಲೇ ಬಂದಿದೆ – ಇದು ವೇದಾಂತ ಕಂಡುಕೊಂಡ ಸತ್ಯ. ಈ ಸತ್ಯವನ್ನು ಉಪನಿಷತ್ತುಗಳು ಆತ್ಮ, ಬ್ರಹ್ಮ, ಸತ್ಯ ಎಂದು ಕರೆಯುತ್ತವೆ. ಉಪನಿಷತ್ತುಗಳನ್ನು ಆಧರಿಸಿ ಹೊರಟ ವೇದಾಂತದರ್ಶನ ಪರಂಪರೆ ತನ್ನ ವೈವಿಧ್ಯಮಯವಾದ ಬೌದ್ಧಿಕ ಚಿಂತನೆಗಳೊಂದಿಗೆ ವಿಸ್ತಾರಗೊಳ್ಳುತ್ತ ಸಾಗಿತು. ಅದರ ಮಾರ್ಗದಲ್ಲಿ ನಾನಾ ದರ್ಶನಗಳು, ಪಂಥಗಳು, ಅವುಗಳ ಶಾಖೋಪಶಾಖೆಗಳು, ಅದಕ್ಕನುಗುಣವಾದ ಸಾಧನಾಕ್ರಮ ಹಾಗೂ ಜೀವನವಿಧಾನಗಳು ರೂಪುಗೊಂಡವು. ಆದರೆ, ಒಂದಲ್ಲ ಒಂದು ಹಂತದಲ್ಲಿ ಈ ದಾರ್ಶನಿಕ ಪರಂಪರೆ ಆಧ್ಯಾತ್ಮಿಕ ಮಹಾಪುರುಷನೊಬ್ಬನ ವ್ಯಕ್ತಿತ್ವದಿಂದಲೂ, ವ್ಯಕ್ತಿರೂಪದ ಭಗವಂತನ ಆರಾಧನೆಯಿಂದಲೂ ಶಕ್ತಿಗ್ರಹಣ ಮಾಡಿಕೊಂಡಿರುವುದು ಇತಿಹಾಸದುದ್ದಕ್ಕೂ ಕಂಡು ಬರುತ್ತದೆ. ಇದರರ್ಥ, ವ್ಯಕ್ತಿ ಮತ್ತು ತತ್ತ್ವ ಇವೆರಡೂ ನಮ್ಮಲ್ಲಿ ಪ್ರತ್ಯೇಕಗೊಳ್ಳಲಿಲ್ಲ. ಆಧ್ಯಾತ್ಮಿಕ ಜಗತ್ತು ಇವೆರಡನ್ನೂ ವಿಭಿನ್ನ ಆಯಾಮಗಳಲ್ಲಿ ಪ್ರಮುಖವನ್ನಾಗಿಸಿತು; ಅಗತ್ಯ ಕಂಡುಬಂದಾಗ ಪರಸ್ಪರ ಹೊಂದಾಣಿಕೆ ಮಾಡಿಕೊಂಡಿತು.

## ಸತ್ಯ–ಅಂತಿಮ ನೆಲೆ

ಆಧ್ಯಾತ್ಮಿಕ ಅನ್ವೇಷಣೆಗಳೆಲ್ಲ ಬಂದು ನಿಲ್ಲುವ ಅಂತಿಮ ನೆಲೆ ಯಾವುದು ಎಂಬ ಪ್ರಶ್ನೆ ಎಷ್ಟೇ ಪ್ರಸ್ತುತವೆನ್ನಿಸಿದರೂ, ವಿಭಿನ್ನ ದೃಷ್ಟಿಕೋನಗಳಿಗೆ ಅನುಗುಣವಾಗಿ ಈ ನೆಲೆ ಭಿನ್ನಭಿನ್ನವಾಗಿ ಕಂಡುಬರುತ್ತದೆ. ಸಾಧಕನ ಇಷ್ಟದೇವತೆಯಿರಲಿ, ಎಲ್ಲ ದೇವತೆಗಳ ಮೂಲವೆನ್ನಲಾದ ನಿರ್ಗುಣ ನಿರಾಕಾರ ಅದ್ವೈತ ಬ್ರಹ್ಮನಿರಲಿ, ವಿಷ್ಣು, ರಾಮ, ದೇವಿಯೇ ಮೊದಲಾದ ದೇವತಾ ತತ್ತ್ವಗಳಿರಲಿ – ಅಂತಿಮ ಹಂತದಲ್ಲಿ ಸರ್ವವ್ಯಾಪಕವಾದ, ಸರ್ವಗ್ರಾಸಿಯಾದ ಇಂದ್ರಿಯಾತೀತ ತಾತ್ತ್ವಿಕತೆಯನ್ನು ತಲುಪುತ್ತವೆ. ಇವೆಲ್ಲ ದೃಷ್ಟಿಕೋನಗಳ ಕೊನೆಯ ಮಾತೆಂದರೆ, 'ಇದೇ ಸತ್ಯ; ಇದನ್ನು ಕಾಣು'. ಆಶ್ಚರ್ಯದ ಸಂಗತಿಯಿದು – ಸತ್ಯ ಎನ್ನುವ ಕಲ್ಪನೆಯಲ್ಲೇ ಎಲ್ಲವೂ ಅಡಗಿದೆ. ಅದನ್ನ ಕಾಣುವ ವಿಧಾನ ಮಾತ್ರ ಭಿನ್ನವಾದುದು. ಅಂತಿಮ ಸತ್ಯವನ್ನು ಅರಸುತ್ತಾ ಹೋಗುವವನಿಗೆ, ಅಂಥದೊಂದಿದೆ ಎಂಬ ಅರಿವು ಇದೆಯಲ್ಲ, ಅದೇ ಅತ್ಯಂತ ವಿಸ್ಮಯದ ಅರಿವು. ಋಗ್ವೇದದಲ್ಲಿ ಬರುವ **ಏಕಂ ಸತ್ ವಿಪ್ರಾ ಬಹುಧಾ ವದಂತಿ** – 'ಸತ್ಯವೆನ್ನುವುದು ಒಂದೇ, ತಿಳಿದವರು ಅದನ್ನು ಹಲವು ರೀತಿ ವಿವರಿಸುತ್ತಾರೆ' ಎಂಬ ಮಂತ್ರ ಎಲ್ಲ ಅರಿವಿನ ಸಾರರೂಪವಾಗಿದೆ. ಸತ್ ಎನ್ನುವ ಅಂತಿಮ ನೆಲೆಯನ್ನು ತಲುಪಿದ ಮಾನವನ ಅರಿವು ಅದರ ಅದ್ಭುತ ಆಯಾಮವನ್ನು ಕಂಡು ಉದ್ಗರಿಸುವ ರೀತಿ ಅದು. ಆಧ್ಯಾತ್ಮಿಕ ಅನ್ವೇಷಣೆ ಹೇಗೆ **ಸತ್** ಎನ್ನುವಲ್ಲಿ ಕೊನೆಗೊಳ್ಳುವುದೋ, ತಾತ್ತ್ವಿಕ ಅರಸುವಿಕೆಯೂ ಅಲ್ಲೇ ತನ್ನ ಕೊನೆಯನ್ನು ಕಂಡುಕೊಳ್ಳಬೇಕು. ಗ್ರಹಿಕೆಯ ಮಿತಿಗೆ ಒಳಪಟ್ಟ ಸತ್ಯದ ದರ್ಶನ ಭಿನ್ನವಾಗಬಹುದಲ್ಲದೆ, ಸತ್ಯವೆಂಬುದು ಸ್ವತಃ ಹಾಗಾಗದು. ಆದ್ದರಿಂದ **ತ್ರಿಕಾಲಾಬಾಧಿತ** (ಮೂರು ಕಾಲಗಳಲ್ಲೂ ಬದಲಾಗದ್ದು) ಎಂದು ಕರೆಯಲ್ಪಡುವ ಸತ್ಯವು ಒಂದು ತತ್ತ್ವವಾಗಿಯೂ ನಿಲ್ಲುತ್ತದೆ; ಒಂದು ಸರ್ವವ್ಯಾಪಕ ನಿಯಮವಾಗಿಯೂ ನಿಲ್ಲುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, 'ಇರುವಿಕೆ' ಎಂಬರ್ಥ ನೀಡುವ **ಸತ್** ಎಲ್ಲ ವಿವರಣೆಗಳನ್ನೂ, ಎಲ್ಲ ಗ್ರಹಿಕೆಗಳನ್ನೂ ಮೀರಿ ತನ್ನ ಅಸ್ತಿತ್ವದಲ್ಲಿ ತಾನೇತಾನಾಗಿರುವ ಒಂದು ಅದ್ವಿತೀಯ ಸಂಗತಿಯಾಗಿ ಕಂಡುಬರುತ್ತದೆ. ಸರ್ವಸ್ವವನ್ನೂ ಒಳಗೊಳ್ಳುವ **ಸತ್** ಅಧ್ಯಾತ್ಮದಲ್ಲೂ, ದರ್ಶನಗಳಲ್ಲೂ, ಧರ್ಮಗಳಲ್ಲೂ, ಕೊನೆಗೆ ತತ್ತ್ವಶಾಸ್ತ್ರದಲ್ಲೂ ಅಪ್ರತಿಮವಾಗಿ ನಿಲ್ಲುತ್ತದೆ. **ಸತ್ಯಮೇವ ಜಯತೇ** ಎಂಬ ಉಪನಿಷತ್ ವಾಕ್ಯದಲ್ಲೂ, **'ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು'** ಎಂಬ ಶ್ರೀರಾಮಕೃಷ್ಣರ ಉಪದೇಶದಲ್ಲೂ, **'ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು'** ಎಂಬ ಕನ್ನಡದ ಗೋವಿನ ಹಾಡಿನಲ್ಲೂ ಸತ್ಯದ ಪಾರಮ್ಯವನ್ನು ಹೇಳಲಾಗಿದೆ. ಧರ್ಮ, ನೀತಿ, ಸಾಧನೆ, ಸಾಕ್ಷಾತ್ಕಾರ – ಎಲ್ಲವೂ ಈ ಮೂಲತತ್ತ್ವವನ್ನೇ ಅವಲಂಬಿಸಿದೆ. ಸತ್ಯದ ಅತ್ಯುನ್ನತ ಅನುಭವವೇನು, ಸತ್ಯದ ಅಸಾಧಾರಣ ಶಕ್ತಿಯೇನು ಇವು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ಕಂಡುಬಂದರೂ, ಸತ್ಯವೆಂಬುದು ಎಲ್ಲದರ ಆಧಾರವೆಂಬುದನ್ನು ಪ್ರತಿಯೊಬ್ಬರೂ ಸ್ವೀಕರಿಸಲೇಬೇಕಾಗುತ್ತದೆ. ಈ ಸ್ವೀಕಾರದ ಮೂಲಕ ಅವನು ಸತ್ಯದ ಕಡೆಗೆ ಎಷ್ಟುದೂರ ಹೋಗಬಲ್ಲ ಎಂಬುದು ಅವನವನ ಸಾಮರ್ಥ್ಯವನ್ನು ಅವಲಂಬಿಸಿದೆ. ಸತ್ಯಕ್ಕಾಗಿ ಬದುಕಿದ ಹರಿಶ್ಚಂದ್ರ, ಸಾವಿತ್ರಿ, ಶ್ರೀರಾಮಕೃಷ್ಣರು ನಮ್ಮ ಬದುಕಿಗೆ ದಾರಿದೀಪವಾಗಿ ನಿಂತರೆ, ಸತ್ಯವೇ ನಮ್ಮ ಬದುಕಿನ ಬೆಳಕಾಗಬಲ್ಲದು.



# ಚಾರಿತ್ರ್ಯದ ಬೆಳವಣಿಗೆ ಮತ್ತು ರಾಷ್ಟ್ರನಿರ್ಮಾಣಕ್ಕಾಗಿ ಶಿಕ್ಷಣ

ಸ್ವಾಮಿ ರಂಗನಾಥಾನಂದ

ಅನುವಾದ: ಸ್ವಾಮಿ ವೀರೇಶಾನಂದ

**ಭಾಗ–೨**

## ಉಪನಿಷತ್ತುಗಳ ನುಡಿಮುತ್ತುಗಳು

ಈಗಾಗಲೇ ಉದ್ಧರಿಸಿದ ಛಾಂದೋಗ್ಯೋಪನಿಷತ್ತಿನಲ್ಲಿ ಬರುವ **ತತ್ತ್ವಮಸಿ** (೬.೧೨.೧–೩) ಎಂಬ ಪ್ರಸಿದ್ಧ ಮಹಾವಾಕ್ಯದಲ್ಲಿಯೂ ಇದೇ ಸತ್ಯತತ್ತ್ವವನ್ನು ನಾವು ಕಾಣುತ್ತೇವೆ. ಆರುಣಿಯೆಂಬ ಋಷಿಯಿದ್ದನು. ಅವನು ತನ್ನ ಮಗನಾದ ಶ್ವೇತಕೇತುವಿನ ಜೊತೆಗೆ ಸ್ವಂತ ಆತ್ಮಾನುಭವವನ್ನು ಹಂಚಿಕೊಳ್ಳುತ್ತಾನೆ. ಇದೊಂದು ಬಹಳ ಆಸಕ್ತಿದಾಯಕ ಬೋಧನೆ; ತುಂಬ ವೈಜ್ಞಾನಿಕವಾದುದು. ಹಂತಹಂತವಾಗಿ ಇದನ್ನು ಉಪದೇಶಿಸಲಾಗಿದೆ. ಉಪನಿಷತ್ತು ಈ ಸಂಭಾಷಣೆಯನ್ನು ಕಥೆಯೊಂದರ ಮೂಲಕ ಆರಂಭ ಮಾಡುತ್ತದೆ. ತತ್ತ್ವಜ್ಞಾನಿ ತಂದೆಯಾದ ಆರುಣಿಯು ತನ್ನ ಮಗನಾದ ಶ್ವೇತಕೇತುವನ್ನು ಹನ್ನೆರಡನೆಯ ವಯಸ್ಸಿಗೇ ಶಿಕ್ಷಣಕ್ಕಾಗಿ ಗುರುಕುಲಕ್ಕೆ ಕಳುಹಿಸುತ್ತಾನೆ. ಗುರುಕುಲದಲ್ಲಿ ಶ್ವೇತಕೇತುವು ಹನ್ನೆರಡು ವರ್ಷಗಳ ಕಾಲ ವಾಸ ಮಾಡುತ್ತಾನೆ. ತದನಂತರ ಮನೆಗೆ ವಾಪಸ್ಸು ಬರುತ್ತಾನೆ. ಮನೆಯಲ್ಲಿ ತಂದೆಯಾದ ಆರುಣಿ ಅವನನ್ನು ಸ್ವಾಗತಿಸುತ್ತ ಒಂದು ಪ್ರಶ್ನೆಯನ್ನು ಕೇಳುತ್ತಾನೆ. ಅದಕ್ಕೆ ಉತ್ತರ ಕೊಡಲು ಮಗನು ಅಸಮರ್ಥನಾದಾಗ, ತಂದೆಯು ಅವನಿಗೆ ತಾನೇ ಮತ್ತಷ್ಟು ಶಿಕ್ಷಣವನ್ನು ನೀಡುತ್ತಾನೆ. ಇವೆಲ್ಲವೂ ವರ್ತಮಾನ ಕಾಲದ ದೀರ್ಘಕಾಲೀನ ಆವಶ್ಯಕತೆಯಾದ ಶಿಕ್ಷಣದ ಪುನರ್‍ರಚನೆಗೆ ಬಹಳ ಪ್ರಸ್ತುತವಾಗಿದೆ.

ಉಪನಿಷತ್ತು ಹೀಗೆ ಮುಂದುವರಿಯುತ್ತದೆ: ಹನ್ನೆರಡನೆಯ ವಯಸ್ಸಿಗೆ ಗುರುಕುಲಕ್ಕೆ ಹೋದ ಶ್ವೇತಕೇತುವು ತಾನು ೨೪ನೆಯ ವಯಸ್ಸಿದ್ದಾಗ ಮತ್ತೆ ಮನೆಗೆ ವಾಪಸ್ಸು ಬಂದನು. ಆ ಸಮಯದಲ್ಲಿ ತನ್ನ ಗುರುವು ತಿಳಿಸಿಕೊಟ್ಟಿದ್ದನ್ನೆಲ್ಲ ಪೂರ್ಣವಾಗಿ ಅಧ್ಯಯನ ಮಾಡಿದ್ದನು. ಇದರಿಂದಾಗಿ ಅವನಿಗೆ ಅಹಂಕಾರ ಬಂದಿತ್ತು. ಅವನು ತಾನೇ ದೊಡ್ಡ ವಿದ್ವಾಂಸನೆಂಬ ಗರ್ವದಲ್ಲಿದ್ದನು. ಇದನ್ನು ಕಂಡು ಅವನ ತಂದೆಯು ಅವನನ್ನು ಹೀಗೆ ಪ್ರಶ್ನಿಸಿದನು: "ಓ ಶ್ವೇತಕೇತು, ನೀನು ಸರಿಯಾಗಿ ಮಾತೂ ಕೂಡ ಆಡುತ್ತಿಲ್ಲ; ಗರ್ವಪಡುತ್ತಿದ್ದೀಯೆ. ನಿನ್ನ ವಿದ್ವತ್ತಿನ ಬಗ್ಗೆ ನಿನಗೆ ಅಹಂಕಾರ ಮೂಡಿದೆ. ಆದರೆ ಓ ಪ್ರಿಯ ಪುತ್ರ, ಯಾವುದು ಬಹುವಾದುದರ ಹಿನ್ನೆಲೆಯಲ್ಲಿ ಒಂದೇ ಆಗಿ ಇದ್ದುಕೊಂಡಿರುತ್ತದೆಯೋ, ಯಾವುದರ ಮೂಲಕ ಕೇಳದೆ ಇರುವುದು ಕೇಳುವಂತೆ ಆಗುತ್ತದೆಯೋ, ಯಾವುದರ ಮೂಲಕ ಆಲೋಚನೆಗೆ ನಿಲುಕದ್ದು ಆಲೋಚನೆಯ ಪರಿಧಿಗೆ ಸಿಲುಕುತ್ತದೆಯೋ, ಯಾವುದರ ಮೂಲಕ ಅಜ್ಞಾತವಾದದ್ದು ಕೂಡ ತಿಳಿದುಬರುತ್ತದೆಯೋ – ಅದನ್ನು ಬೋಧಿಸುವಂತೆ ನಿನ್ನ ಗುರುಗಳನ್ನು ನೀನು ಕೇಳಿಕೊಂಡೆಯೇನು?"

"ಭಗವನ್, ಆ ಉಪದೇಶವು ಹೇಗೆ ಇರುತ್ತದೆ?" ಎಂದು ಶ್ವೇತಕೇತುವು ಪ್ರಶ್ನಿಸುತ್ತಾನೆ.

ಅದಕ್ಕೆ ಗುರುವು ಹೀಗೆ ಉಪದೇಶಿಸುತ್ತಾನೆ: "ಸೋಮ್ಯ, ಒಂದು ಮಣ್ಣಿನ ಹೆಂಟೆಯನ್ನು ಅರಿತುಕೊಂಡರೆ, ಮಣ್ಣಿನಿಂದ ಆದ ಎಲ್ಲವನ್ನೂ ಅರಿತುಕೊಂಡಂತೆ ಆಗುತ್ತದೆಯಷ್ಟೆ. ಮಣ್ಣಿನ ಎಲ್ಲ ಬಗೆಯ ವಿಕಾರಗಳೂ ಹೆಸರುಗಳು ಮಾತ್ರ (ನಿಜವಾಗಿ ಅವು ಸತ್ಯವಲ್ಲ). ಮಣ್ಣು ಮಾತ್ರವೇ ಸತ್ಯ."

"ನಿಜವಾಗಲೂ ನನ್ನ ಗುರುಗಳಿಗೆ ಇದು ತಿಳಿದಿರಲಿಲ್ಲವೆಂದು ತೋರುತ್ತದೆ. ಅದನ್ನು ಅವರು ಅರಿತಿದ್ದರೆ, ನನಗೆ ಹೇಗೆ ತಾನೇ ಹೇಳಿಕೊಡದೆ ಇರುತ್ತಿದ್ದರು? ಗುರುಗಳಾದ ನೀವೇ ನನಗೆ ಅದನ್ನು ಹೇಳಿಕೊಡಬೇಕು."

ತಂದೆ ಇದಕ್ಕೆ ಒಪ್ಪಿದನು : "ಹಾಗೇ ಆಗಲಿ, ಸೋಮ್ಯ"

ತಂದೆಯು ಅನೇಕ ವಾದಗಳ ಹಾಗೂ ಉದಾಹರಣೆಗಳ ಮೂಲಕ ತನ್ನ ಮಗನಿಗೆ ಈ ವಿಷಯವನ್ನು ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾನೆ. ಅವುಗಳಲ್ಲಿ ಒಂದು ಹೀಗಿದೆ:

ತಂದೆ ಮಗನಿಗೆ ಹೀಗೆ ಹೇಳುತ್ತಾನೆ: " ಮಗೂ, ಆಲದ ಹಣ್ಣನ್ನು ತೆಗೆದುಕೊಂಡು ಬಾ."

"ಇಗೋ, ಗುರುಗಳೇ ತಂದೆ."
"ಅದನ್ನು ಒಡೆದು ನೋಡು."
"ಒಡೆದೆ, ಗುರುಗಳೇ."
"ಅಲ್ಲಿ ನಿನಗೆ ಏನು ಕಾಣುತ್ತದೆ?"
"ಅಣುಗಳಂತೆ ಇರುವ ಬೀಜಗಳು, ಗುರುಗಳೇ."
"ಅವುಗಳಲ್ಲಿ ಒಂದನ್ನು ಒಡೆದು ನೋಡು."
"ಒಡೆದೆ, ಗುರುಗಳೇ."
"ಅಲ್ಲಿ ನಿನಗೆ ಏನು ಕಾಣುತ್ತಿದೆ?"
"ಏನೂ ಇಲ್ಲ, ತಂದೆ"

ಆಗ ತಂದೆಯು ಮಗನನ್ನು ಕುರಿತು ಹೀಗೆ ಹೇಳಿದನು: "ಮಗೂ, ಯಾವ ಬೀಜವನ್ನು ನೀನು ಅಣುವೆಂದು ಕರೆದೆಯೋ, ಅದೇ ಅಣುವಿನಿಂದಲೇ ಮಗೂ, ಹೀಗೆ ದೊಡ್ಡದಾಗಿರುವ ಆಲದ ಮರವು ಎದ್ದು ನಿಂತಿದೆ. ಮಗೂ, ಶ್ರದ್ಧೆಯಿಡು" **(ಶ್ರದ್ಧಸ್ವ ಸೋಮ್ಯ)**

## ಆಧುನಿಕ ವಿಜ್ಞಾನದೊಡನೆ ವೇದಾಂತದ ಒಳನೋಟದ ಬೆಸುಗೆ

ಮೇಲಿನ ಸಾಲುಗಳನ್ನು ಆಧುನಿಕ ಪರಮಾಣು ಭೌತಶಾಸ್ತ್ರದ 'ಫೀಲ್ಡ್' (field) ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಬಹಳ ಸುಲಭವಾಗಿ ಅಳವಡಿಸಿಕೊಳ್ಳಬಹುದು. ಪರಮಾಣು ಪದಾರ್ಥಗಳು (particles) ಎಲ್ಲಿಂದ ಮೂಡಿ, ಮತ್ತೆ ಎಲ್ಲಿ ಮರೆಯಾಗುವವೋ ಅದನ್ನು 'ಫೀಲ್ಡ್' ಎಂದು ಕರೆಯುತ್ತಾರೆ. ಇದು ಬಹಳ ಸೂಕ್ಷ್ಮವಾದುದು ಮತ್ತು ಇಂದ್ರಿಯಗಳ ಸಮೀಕ್ಷೆಗೆ ಒಳಪಡದ್ದು. ಏನೂ ಇಲ್ಲದಂತೆ ಕಂಡುಬಂದರೂ, ಇಡೀ ವಿಶ್ವದ ಮೂಲಘಟಕಗಳಾಗಿರುವುದರಿಂದ ಎಲ್ಲವೂ ಆಗಿರುವಂಥವೇ ಅವು.

ಕಡೆಯದಾಗಿ ತಂದೆ ಆರುಣಿ ತನ್ನ ಮಗನಿಗೆ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಉಲ್ಲೇಖವಾಗಿರುವ ವಿಷಯವೊಂದನ್ನು ವಿವರಿಸುತ್ತಾನೆ. ಅದು ಹೀಗಿದೆ: **ಸತ್ಯಸ್ಯ ಸತ್ಯಂ, ಪ್ರಾಣಾ ವೈ ಸತ್ಯಂ, ತೇಷಾಮ್ ಏಷ ಸತ್ಯಮ್** – 'ಇದೇ ಸತ್ಯದ ಸತ್ಯ. ಪ್ರಾಣವೇ ಸತ್ಯ. ಈ ಆತ್ಮವು ಆ ಪ್ರಾಣಕ್ಕೂ ಸತ್ಯ.' ಮುಂದುವರೆದು ತಂದೆಯು ಮಗನಿಗೆ ಹೀಗೆ ಬೋಧಿಸುತ್ತಾನೆ: **ಸ ಯ ಏಷೋ ಅಣಿಮಾ ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ** – " ಈ ಅಣುವಿನಂತೆ ಇದೆಯಲ್ಲಾ. ಇದೇ ಎಲ್ಲಕ್ಕೂ ಆತ್ಮಸ್ವರೂಪವು. ಇದೇ ಸತ್ಯವು. ಇದೇ ಆತ್ಮನು. ಶ್ವೇತಕೇತುವೇ, ಇದೇ ನೀನಾಗಿರುವೆ"

ಹೀಗೆ **ತತ್ತ್ವಮಸಿ** ಎನ್ನುವುದು ಭಾರತೀಯ ಋಷಿ ಮುನಿಗಳು ಕಂಡುಹಿಡಿದ ಅತ್ಯಂತ ಶ್ರೇಷ್ಠವಾದ ಆಧ್ಯಾತ್ಮಿಕ ಬೋಧನೆಯಾಗಿದೆ. ಐನ್‌ಸ್ಟೈನ್ ಪರಮಾಣು ಶಕ್ತಿಯ ವಿಷಯದಲ್ಲಿ ಒಂದು ಸಮೀಕರಣವನ್ನು ಕಂಡುಹಿಡಿದನು. ಅದೇ $E=mc^2$. ಇದು ಪರಮಾಣು ವಿಜ್ಞಾನದಲ್ಲಿ ಅತ್ಯದ್ಭುತವಾದ ಒಂದು ಆವಿಷ್ಕಾರ. ಇದೇ ರೀತಿ, ವೇದಾಂತದಲ್ಲಿ ಮಾನವನ ನಿಜವಾದ ಸ್ವರೂಪದ ಬಗ್ಗೆ **ತತ್ತ್ವಮಸಿ** ಎಂಬ ಪರಮೋತ್ಕೃಷ್ಟ ಸಮೀಕರಣವನ್ನು ಕಾಣುತ್ತೇವೆ! **ತತ್ತ್ವಮಸಿ** ಎಂದರೆ 'ಅದು ನೀನೇ ಆಗಿದ್ದೀಯೆ' ಎಂದರ್ಥ. ಇಲ್ಲಿ **ತತ್** ಅಥವಾ ಅದು ಎಂದರೆ ಇಡೀ ವಿಶ್ವವೇ ಯಾವ ಮೂಲದಿಂದ ಅಭಿವ್ಯಕ್ತಗೊಂಡಿದೆಯೋ, ಅಂಥ ಪರಿಶುದ್ಧ ಚೈತನ್ಯವಾದ ಪರಬ್ರಹ್ಮ ಎಂದರ್ಥ. ಈ ಪರತತ್ತ್ವವನ್ನು ವಿಭಜಿಸಲಾಗುವುದಿಲ್ಲ. ಇದು ಅಖಂಡವಾದುದು. ಹಾಗೆಯೇ ಇದು ಸಚ್ಚಿದಾನಂದ ಸ್ವರೂಪ, ಅಂದರೆ ಪರಿಶುದ್ಧ ಅಸ್ತಿತ್ವ, ಪರಿಶುದ್ಧ ಜ್ಞಾನ ಮತ್ತು ಪರಿಶುದ್ಧ ಆನಂದಗಳೇ ತನ್ನ ಸ್ವರೂಪವನ್ನಾಗಿ ಉಳ್ಳದ್ದು. ಇದು ನಿಮ್ಮಲ್ಲಿ, ನನ್ನಲ್ಲಿ ಹಾಗೂ ಎಲ್ಲ ಜೀವಿಗಳಲ್ಲಿಯೂ ಅಂತರ್ಗತವಾಗಿದೆ. ನಾನು ಅಂತರ್ಮುಖಿಯಾದರೆ, ಯಾವತ್ತೂ ಇದ್ದೇ ಇರುವ ಈ ನನ್ನ ಆಧ್ಯಾತ್ಮಿಕ ಸ್ವಭಾವದ ಹಾಗೂ ಅದರ ಆಧ್ಯಾತ್ಮಿಕ ಶಕ್ತಿಯ ಸಂಸ್ಪರ್ಶವು ನನಗಾಗುತ್ತದೆ. ಈ ಆಯಾಮದ ಸೆಲೆಯಿಂದ ನನ್ನ ಜೀವನದಲ್ಲಿ, ನಡವಳಿಕೆಯಲ್ಲಿ ಮತ್ತು ಮಾನವೀಯ ಸಂಬಂಧಗಳಲ್ಲಿ ಆಧ್ಯಾತ್ಮಿಕ ಸುಸಂಪನ್ನತೆಯನ್ನು ನಾನು ಪ್ರಕಟಗೊಳಿಸಿಕೊಳ್ಳಬೇಕು. ಆಗಮಾತ್ರವೇ ನಾನು ಪ್ರಬುದ್ಧ ನಾಗರಿಕನಿಗೆ ಇರಬೇಕಾದ ಗುಣಗಳನ್ನೂ, ಸಾಮಾಜಿಕ ಜವಾಬ್ದಾರಿಯನ್ನೂ, ಇತರರ ಬಗ್ಗೆ ಕಳಕಳಿಯನ್ನೂ, ಕಾರ್ಯದಲ್ಲಿ ದಕ್ಷತೆಯನ್ನೂ ಹಾಗೂ ಸೇವಾ ಮನೋಭಾವವನ್ನೂ ಬೆಳೆಸಿಕೊಳ್ಳಲು ಸಾಧ್ಯ. ಇವುಗಳನ್ನು ನಾವು ಸ್ವಲ್ಪವಾದರೂ ನಮ್ಮ ಜೀವನದಲ್ಲಿ ಪ್ರಕಟಗೊಳಿಸಿಕೊಂಡರೂ, ಉನ್ನತ ಚಾರಿತ್ರ್ಯ ನಮ್ಮದಾಗುತ್ತದೆ. ಈ ಬಗೆಯ ಉಪದೇಶವನ್ನು ನಾವು ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿಯೂ ಕಾಣುತ್ತೇವೆ. ಅಲ್ಲೇ ಇನ್ನೊಂದು ಕಡೆ ಶ್ರೀಕೃಷ್ಣ ಹೀಗೆ ಹೇಳುತ್ತಾನೆ: **ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್** – "ಈ ಧರ್ಮ ಅಥವಾ ಸನ್ನಡತೆಯನ್ನು ನಾವು ಸ್ವಲ್ಪವಾದರೂ ಬೆಳೆಸಿಕೊಂಡರೆ ಸಾಕು, ಅದು ನಮ್ಮನ್ನು ಬಹುದೊಡ್ಡ ಭಯದಿಂದ ಪಾರು ಮಾಡುತ್ತದೆ."

## ಆತ್ಮವಿಕಾಸ

ಈ ಆಧ್ಯಾತ್ಮಿಕ ಪ್ರಗತಿಯಲ್ಲಿ ಶೇಕಡ ಒಂದು ಅಥವಾ ಎರಡು ಭಾಗದಷ್ಟಾದರೂ ನಾವು ಸಾಧಿಸಲು ಸಾಧ್ಯವಾದರೆ,

ಅದು ನಮ್ಮನ್ನು ಎಷ್ಟೋ ಭಯದಿಂದ ಪಾರು ಮಾಡುತ್ತದೆ; ಮಾತ್ರವಲ್ಲ, ನಮ್ಮಿಂದಲೂ ಇತರರಿಗೆ ಭಯವುಂಟಾಗುವುದು ತಪ್ಪುತ್ತದೆ. ಇದೇ ನಮಗೆ ಈಗ ಅತ್ಯಾವಶ್ಯಕವಾಗಿ ಬೇಕಾದುದು. ಇದನ್ನು ನಾವು ನಮ್ಮ ಶಾಲಾಕಾಲೇಜುಗಳ ವಿದ್ಯಾಭ್ಯಾಸದ ಜೊತೆಜೊತೆಗೇ ಸಾಧಿಸಿಕೊಳ್ಳಬೇಕು. ಆಧ್ಯಾತ್ಮಿಕ ಪ್ರಗತಿ ಅಥವಾ ಆತ್ಮವಿಕಾಸವು ಉಂಟಾಗದಿದ್ದರೆ, ವಿದ್ಯಾವಂತನಾದವನ ಮೆದುಳು ಭಯಾನಕ ಆಲೋಚನೆಗಳ ಆಗರವಾಗಿಬಿಡುತ್ತದೆ. ಮೆದುಳಿನ ಶಕ್ತಿಗೆ ಅನುರೂಪವಾದ ಆಧ್ಯಾತ್ಮಿಕ ಬೆಳವಣಿಗೆಯಿಲ್ಲದಿದ್ದರೆ, ಅಂಥ ವ್ಯಕ್ತಿಯು ಚಾರಿತ್ರ್ಯವನ್ನು ಪಡೆದುಕೊಳ್ಳಲು ಅಸಮರ್ಥನಾಗುತ್ತಾನೆ. ಭಾರತದಲ್ಲಿ ನಾವೀಗ ಕಾಣುತ್ತಿರುವ ಎಲ್ಲ ಸಮಸ್ಯೆಗಳನ್ನೂ ಸೃಷ್ಟಿಸಿದವರಾರು ಗೊತ್ತೆ? ಆಧ್ಯಾತ್ಮಿಕ ಪ್ರಗತಿಯಿಲ್ಲದ ನಮ್ಮವರೇ ಆದ ವಿದ್ಯಾವಂತ ಜನರು! ಜಗತ್ತಿನ ಎಲ್ಲ ಕಡೆ ಹೀಗೆಯೇ ನಡೆಯುತ್ತದೆ. ಆದರೆ ನಮ್ಮ ದೇಶದ ವಿಷಯದಲ್ಲಂತೂ ಇದು ಹೆಚ್ಚು ಸತ್ಯ. ಆದ್ದರಿಂದ, ನಾವು ವೈಜ್ಞಾನಿಕ ದೃಷ್ಟಿಕೋನದಲ್ಲಿ ಧರ್ಮವನ್ನು ಅರ್ಥಮಾಡಿಕೊಳ್ಳುವುದಾದರೆ, ಅಂತರಾಳದಲ್ಲಿರುವ ದಿವ್ಯತೆಯನ್ನು ವಿಕಾಸಮಾಡಿಕೊಳ್ಳುವುದೇ ಧರ್ಮವೆನಿಸಿಕೊಳ್ಳುತ್ತದೆ. ಎಂಥ ಸುಂದರವಾದ ಭಾವನೆ ಇದು! ನೀವು ಅಭಿವ್ಯಕ್ತಿಗೊಳಿಸಿಕೊಳ್ಳುವ ಚಾರಿತ್ರ್ಯದ ಪ್ರಮಾಣದ ಆಧಾರದ ಮೇಲೆ ನಿಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಅಳೆಯಬಹುದು. ನಿಮ್ಮಲ್ಲಿ ಚಾರಿತ್ರ್ಯ ಹೆಚ್ಚಾಗಿದ್ದಷ್ಟೂ, ದಿವ್ಯತೆಯ ಅಭಿವ್ಯಕ್ತಿಯೂ ಅಧಿಕವಾಗಿ ಇರುತ್ತದೆ. ವೇದಾಂತವನ್ನು ಹೀಗೆ ಅನುಷ್ಠಾನಯೋಗ್ಯವನ್ನಾಗಿ ಮಾಡುವ ವಿಧಾನವನ್ನು ಸ್ವಾಮಿ ವಿವೇಕಾನಂದರು ಬೋಧಿಸಿದರು; ಈ ಅನುಷ್ಠಾನ ವೇದಾಂತದ ಆಧಾರದ ಮೇಲೆ ನಮ್ಮ ಭಾರತೀಯ ಸಮಾಜವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯುವುದು ಹೇಗೆಂದು ಉಪದೇಶಿಸಿದರು. ಈ ಆದರ್ಶಗಳನ್ನು ಅನುಷ್ಠಾನಕ್ಕೆ ತಂದ ಸಮಾಜ ಹೇಗಿರುತ್ತದೆ, ಗೊತ್ತೆ? ಸ್ವಾತಂತ್ರ್ಯ, ಸಮಾನತೆ, ಮಾನವ ವ್ಯಕ್ತಿತ್ವದ ಘನತೆ, ಮಾನವೀಯ ಸಂಬಂಧಗಳ ಅತ್ಯುತ್ತಮ ಸ್ವರೂಪವಾಗಿ ಸೇವೆ – ಇವುಗಳನ್ನು ಆಧಾರವಾಗಿ ಹೊಂದಿರುತ್ತದೆ.

ಸ್ವಾಮಿ ವಿವೇಕಾನಂದರು 'ತ್ಯಾಗ–ಸೇವೆ'ಗಳೇ ಭಾರತದ ರಾಷ್ಟ್ರೀಯ ಧ್ಯೇಯಗಳು ಎಂದು ಹೇಳಿದರು. ಈ ಮಾರ್ಗಗಳನ್ನು ಉತ್ಕಟಗೊಳಿಸಿ ನಮ್ಮ ದೇಶವನ್ನು ಮುನ್ನಡೆಸಿರಿ; ಉಳಿದದ್ದು ತಾನೇತಾನಾಗಿ ಸರಿಹೊಂದುತ್ತದೆ ಎಂದೂ ಅವರು ಬೋಧಿಸಿದರು. ಆದ್ದರಿಂದ, ನೀವು ವಿದ್ಯಾರ್ಥಿದೆಸೆಯಲ್ಲಿ ಇರುವಾಗಲೇ, ಈ ರೀತಿ ಆಲೋಚನೆ ಮಾಡುವುದನ್ನು ಕೂಡ ಕಲಿಯಬೇಕು. ಪರೀಕ್ಷೆಯಲ್ಲಿ ಚೆನ್ನಾಗಿ ಅಂಕಗಳನ್ನು ಪಡೆದುಕೊಳ್ಳುವುದು, ಒಳ್ಳೆಯ ಸಂಬಳ ಬರುವ ಉದ್ಯೋಗವನ್ನು ಹೊಂದುವುದು, ಭಾರೀ ವರದಕ್ಷಿಣೆ ಪಡೆದು ಮದುವೆಯಾಗುವುದು – ಇವು ಈ ಶ್ರೇಷ್ಠ ಮಾನವ ಜೀವಿತದ ಗುರಿಗಳಲ್ಲ. ಇವುಗಳಿಂತಲೂ ಉನ್ನತವಾದದ್ದನ್ನು ನಾವು ಸಾಧಿಸಬೇಕಾಗಿದೆ. ನಮ್ಮ ದುರ್ಬಲವರ್ಗದವರ ಕಣ್ಣೀರನ್ನು ಅಳಿಸಿ, ಅವರನ್ನು ಸಂತುಷ್ಟರನ್ನಾಗಿ ಮಾಡುವುದೇ ನಮ್ಮ ಜೀವನದ ಧ್ಯೇಯವಾಗಬೇಕು. "ನಾವೆಲ್ಲರೂ ಒಂದೇ. ಇತರರು ದುಃಖಿಸುತ್ತಿರುವಾಗ, ನಾವು ಹೇಗೆ ತಾನೇ ಸಂತೋಷದಿಂದ ಇರಬಲ್ಲೆವು?" – ನಮ್ಮ ದೇಶದಲ್ಲೆಲ್ಲಾ ಈ ಬಗೆಯ ಪ್ರಜ್ಞೆ ಮೂಡಬೇಕು. ಇತರರ ಬಗ್ಗೆ ಇಂಥ ಕಳಕಳಿ, ಮಾನವೀಯ ಪ್ರಜ್ಞೆ ನಮ್ಮೆಲ್ಲರಲ್ಲೂ ಮೂಡಬೇಕು. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಇದನ್ನೇ ಹೇಳುತ್ತಾನೆ:

**ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।**
**ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ ॥**

*(ಗೀತಾ: ೬:೩೨)*

"ಎಲೈ ಅರ್ಜುನ, ಯಾವನು ಎಲ್ಲಾ ಪ್ರಾಣಿಗಳಲ್ಲಿಯೂ ಸುಖವನ್ನಾಗಲಿ ದುಃಖವನ್ನಾಗಲಿ ತನ್ನಂತೆಯೇ ಸಮವಾಗಿ ನೋಡುವನೋ ಆ ಯೋಗಿಯು ಶ್ರೇಷ್ಠನೆಂದು ನನ್ನ ಅಭಿಪ್ರಾಯ."

### ಕಾರ್ಯರೂಪದಲ್ಲಿ ವೇದಾಂತ

'ಸಮದೃಷ್ಟಿ' 'ಸಮಭಾವ', 'ಎಲ್ಲವನ್ನೂ, ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡುವುದು' – ಇದನ್ನು ಬೆಳೆಸಿಕೊಂಡಾಗ, ಚಾರಿತ್ರ್ಯ ವರ್ಧನೆಯಾಗುತ್ತದೆ. ಚಾರಿತ್ರ್ಯದ ಬೆಳವಣಿಗೆಯು ನಮ್ಮ ಶಿಕ್ಷಣದ ಅವಿನಾಭಾವ ಅಂಗವಾಗಬೇಕೆಂದು ಸ್ವಾಮಿ ವಿವೇಕಾನಂದರು ಆಶಿಸಿದ್ದರು. ಚಾರಿತ್ರ್ಯಹೀನ ಶಿಕ್ಷಣವು ನಿಜಕ್ಕೂ ಅಪಾಯಕಾರಿ. ಇಂಥ ಮಾನವಬುದ್ಧಿಮತ್ತೆಯಿಂದ ಇಡೀ ಪ್ರಪಂಚವೇ ವಿನಾಶಗೊಳ್ಳಬಹುದು. ನಮಗೆ ಗೊತ್ತು, ಎಷ್ಟೊಂದು ಪಕ್ಷಿವೈವಿಧ್ಯಗಳು, ವೃಕ್ಷಭೇದಗಳು, ಪ್ರಾಣಿಸಂಕುಲಗಳು ಈಗ ಅವಸಾನವಾಗಿಬಿಟ್ಟಿವೆ! ಇದಕ್ಕೆ ಯಾರು ಕಾರಣ ಗೊತ್ತೇ? ಅತ್ಯಂತ ಸುಶಿಕ್ಷಿತ ಜನಾಂಗ! ಇತ್ತೀಚಿಗೆ ಬ್ರೆಜಿಲ್‌ನ ರಿಯೋ–ಡಿ–ಜನೈರೋದಲ್ಲಿ ನಡೆದ ಭೂಮಿ ಸಮ್ಮೇಳನದ (Earth Conference) ಮೂಲಕ ನಮ್ಮ ಜನರಿಗೆ ಇದರ ಬಗ್ಗೆ ಸ್ವಲ್ಪ ಅರಿವು ಬಂದಿದೆ. ಪ್ರಕೃತಿಯ ಬಗ್ಗೆ ಮತ್ತು ಒಟ್ಟಾರೆ ಮಾನವತೆಯ ಬಗ್ಗೆ ತಮ್ಮ ಜವಾಬ್ದಾರಿಗಳ ಬಗ್ಗೆ ಜನರು ಅರಿತುಕೊಳ್ಳಲು ಆರಂಭಿಸಿದ್ದಾರೆ. ಮಾನವ ಜೀವಿಗಳಾಗಲಿ ಅಥವಾ ಇತರೆ ಜೀವರಾಶಿಗಳಾಗಲಿ ಎಲ್ಲರ ಬಗ್ಗೆಯೂ ನಮಗೆ ಕಳಕಳಿ ಇರಬೇಕು. ಆಗ ಮಾತ್ರ ವೇದಾಂತದ ಕರೆಯನ್ನು ನೀವು ಸಮರ್ಥವಾಗಿ ಸ್ವೀಕರಿಸಬಲ್ಲಿರಿ. ನಮ್ಮ ದೇಶದ ತತ್ತ್ವಶಾಸ್ತ್ರದ ಸಂಪತ್ತಿನ ಶ್ರೇಷ್ಠತೆಯೇ ಇದು. ಆದರೆ ದುರದೃಷ್ಟವಶಾತ್, ಇಂದು ಕೆಲವೇ ಕೆಲವು ಪಂಡಿತರು ಮತ್ತು ಸಾಧುಸಂತರು ವೇದಾಂತದ ಅಧ್ಯಯನವನ್ನು ಕೈಗೊಳ್ಳುತ್ತಿದ್ದಾರೆ. ಉಳಿದ ನಮ್ಮ ಜನರು ಜ್ಯೋತಿಪುಂಜದಂತಿರುವ ತಮ್ಮ ಈ ಪರಂಪರೆಯ ಬಗೆಗಿನ ಗಾಢ ಅಜ್ಞಾನದಲ್ಲಿಯೇ ಆನಂದವಾಗಿದ್ದಾರೆ!

ಅನುಷ್ಠಾನ ವೇದಾಂತ, ಅಂದರೆ ನಾವು ಬಾಳಿ ಬದುಕಬಹುದಾದ ತತ್ತ್ವವನ್ನು ಬೋಧಿಸುವ ಅತ್ಯುತ್ತಮ ಗ್ರಂಥವೆಂದರೆ ಭಗವದ್ಗೀತೆ. ಇದು ವಿದ್ಯಾವಂತರೆನ್ನಿಸಿಕೊಂಡ ನಮ್ಮವರಿಗೆ ಪುನರ್‌ಶಿಕ್ಷಣ ನೀಡಿ, ಅವರನ್ನು ದಕ್ಷ ಕಾರ್ಯಕರ್ತರನ್ನಾಗಿಯೂ, ಆ ಮೂಲಕ ರಾಷ್ಟ್ರನಿರ್ಮಾಪಕರನ್ನಾಗಿಯೂ ರೂಪಿಸಬಲ್ಲುದು. ನಮ್ಮ ಇಡೀ ರಾಷ್ಟ್ರವನ್ನು ಮೇಲೆತ್ತಲು ಬೇಕಾದ ಶಕ್ತಿ–ಸಾಮರ್ಥ್ಯಗಳು ಮೂಡಿ ಬರಬೇಕಾದುದು ನಮ್ಮ ಸುಶಿಕ್ಷಿತ ವರ್ಗದಿಂದಲೇ. ಇಂಗ್ಲೆಂಡ್ ದೇಶವು ಶಕ್ತಿಶಾಲಿಯಾದದ್ದು ಶಿಕ್ಷಣದಿಂದಲೇ. ಅಲ್ಲಿನ ಜನರು ತಮ್ಮ ದೇಶದ ಕಲ್ಯಾಣಕ್ಕಾಗಿ ಸೇವೆ ಸಲ್ಲಿಸಬೇಕೆಂಬ ಉದಾತ್ತ ಉದ್ದೇಶದಿಂದಲೇ ಶಾಲಾಕಾಲೇಜುಗಳಲ್ಲಿ ಜ್ಞಾನಾರ್ಜನೆಯನ್ನು ಕೈಗೊಂಡರು. ನಮ್ಮ ಸ್ವಂತ ಸ್ವಾರ್ಥಕ್ಕಾಗಿ ಶಿಕ್ಷಣವನ್ನು ದುರುಪಯೋಗಪಡಿಸಿಕೊಳ್ಳುವ ಜನಾಂಗ ನಾವು ಮಾತ್ರ! ನಾವು ನಮ್ಮ ದೇಶದ ಪ್ರಜಾಸತ್ತಾತ್ಮಕ ಪ್ರಜೆಗಳಾಗಿ, ನಮ್ಮ ಜವಾಬ್ದಾರಿಗಳ ಬಗ್ಗೆ ಸ್ವಲ್ಪವೂ ಕಾಳಜಿ ವಹಿಸುವುದಿಲ್ಲ. ಸ್ವಾಮಿ ವಿವೇಕಾನಂದರು ೧೮೯೪ರಲ್ಲಿ, ಅಂದಿನ ಮೈಸೂರು ಪ್ರಾಂತ್ಯದ ಮಹಾರಾಜರಾದ ಚಾಮರಾಜ ಒಡೆಯರ್ ಅವರಿಗೆ ಒಂದು ಪತ್ರವನ್ನು ಬರೆಯುತ್ತಾರೆ. ಅದರಲ್ಲಿನ ಒಂದು ವಾಕ್ಯವನ್ನು ನಾನು ಉದಾಹರಿಸುತ್ತೇನೆ. ಇದನ್ನು ನಿಮ್ಮ ಜೊತೆಗೆ ಇಟ್ಟುಕೊಳ್ಳಿ; ಇದರ ಬಗ್ಗೆ ಗಾಢವಾಗಿ ಆಲೋಚಿಸಿ ಮತ್ತು ರಕ್ತಗತವನ್ನಾಗಿ ಮಾಡಿಕೊಳ್ಳಿ. ಈ ಪತ್ರದಲ್ಲಿ *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೪, ಪು.೧೪೪)* ಸ್ವಾಮೀಜಿ ಹೀಗೆ ಬರೆಯುತ್ತಾರೆ: "ಕೆಲವು ದಿನದ ಬಾಳುವೆಯದು ಈ ಜನ್ಮ. ಜಗತ್ತಿನ ಸುಖಭೋಗಗಳೆಲ್ಲ ಕ್ಷಣಿಕ. ಯಾರು ಪರರ ಹಿತಕ್ಕಾಗಿ ಬದುಕುವರೋ ಅವರೇ ಜೀವಂತರು. ಉಳಿದವರೆಲ್ಲ ಜೀವಚ್ಛವರು."

ನಾವು ನಿಜವಾಗಲೂ ಜೀವಿಸಬೇಕಾದರೆ, ಇತರರ ಮೇಲೆ ಕಳಕಳಿಯನ್ನು ಬೆಳೆಸಿಕೊಂಡು, ನಮ್ಮ ಕೈಲಾದಷ್ಟು ಅವರ ಸೇವೆ ಮಾಡಬೇಕು. ಆಧ್ಯಾತ್ಮಿಕತೆಯ ಅಂತರಾಳದಿಂದ ಬರುವ ಭಾವನೆಯೆಂದರೆ ಇದೇ. ಪ್ರತಿಯೊಬ್ಬ ಜೀವಿಯೂ ಸಕ್ಷಮನಾಗಬೇಕು, ಕ್ರಿಯಾಶೀಲನಾಗಬೇಕು ಮತ್ತು ಮಾನವೀಯ ಗುಣಗಳನ್ನು ಹೊಂದಿರಬೇಕು. ಆದ್ದರಿಂದ ಈ ವಾಕ್ಯವು ನಮ್ಮೆಲ್ಲ ಯುವಕರಿಗೂ ದಾರಿದೀಪವಾಗಬೇಕು: "ಯಾರು ಪರರ ಹಿತಕ್ಕಾಗಿ ಬದುಕುತ್ತಾರೋ ಅವರೇ ನಿಜವಾಗಿ ಬದುಕಿರುವವರು; ಉಳಿದವರೆಲ್ಲ ಬದುಕಿದ್ದರೂ ಸತ್ತಂತೆಯೇ."

## ನಮ್ಮ ಆಧ್ಯಾತ್ಮಿಕ ಪರಂಪರೆ

ಆಧುನಿಕ ಭಾರತೀಯ ಇತಿಹಾಸವನ್ನು ನಾವು ಅಧ್ಯಯನ ಮಾಡಿದಾಗ, ಇಂಥ ಸಾವಿರಾರು ಮಹಾನ್ ವ್ಯಕ್ತಿಗಳು ಕಂಡುಬರುತ್ತಾರೆ. ಅವರು ತಮ್ಮ ದೇಶ ಮತ್ತು ಅದರ ಒಳಿತಿನ ಬಗ್ಗೆ ಚಿಂತಿಸಿದರು. ಅವರೆಲ್ಲರೂ ಆ ಭಾವನೆಯಿಂದಲೇ ನಮ್ಮ ದೇಶದ ಸೇವೆ ಮಾಡಿದರು; ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಹಾಗೂ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದರು. ಆದ್ದರಿಂದ ಅವರೆಲ್ಲರೂ ಸ್ವಾಮೀಜಿಯವರ 'ಜೀವಂತ ವ್ಯಕ್ತಿ'ಗಳ ವ್ಯಾಖ್ಯಾನಕ್ಕೆ ಸರಿಹೊಂದುತ್ತಾರೆ. ಆದರೆ ಸ್ವಾತಂತ್ರ್ಯಾನಂತರದ ಕಾಲದಲ್ಲಿ ನಾವು ಹೆಚ್ಚು ಹೆಚ್ಚು 'ಸತ್ತ ವ್ಯಕ್ತಿ' ಗಳನ್ನೇ ಹೊಂದಿದ್ದೇವೆ. ಅವರು ದೇಶಕ್ಕಾಗಿ ಸ್ವಲ್ಪವೂ ಕಾಳಜಿ ವಹಿಸಿದೆ, ಪೂರ್ಣ ವಾಗಿ ಸ್ವ–ಕೇಂದ್ರಿತ ಜೀವನ ನಡೆಸುವಂಥವರು. ಆದ್ದ ರಿಂದ ನಮ್ಮಲ್ಲಿ ಅಡಗಿರುವ ದಿವ್ಯತೆಯನ್ನು ನಮ್ಮ ಜೀವನದಲ್ಲಿ ವಿಕಾಸಗೊಳಿಸಿಕೊಳ್ಳುವುದು ಹೇಗೆ ಮತ್ತು ಮಾನವೀಯ ಸಂಬಂಧಗಳನ್ನು ಸದೃಢಗೊಳಿಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ನಮ್ಮ ಗಮನ ಹರಿಸಬೇಕು. ಅನುಕಂಪದ ಭಾವನೆ ಇಲ್ಲದ, ಕೇವಲ ಬರಡು ಪಾಂಡಿತ್ಯದ ಮೆದುಳಿನಿಂದ ಏನೂ ಪ್ರಯೋಜನವಿಲ್ಲ. ದುರದೃಷ್ಟವಶಾತ್, ಈ ಭಾವನೆಗಳನ್ನು ನಮ್ಮ ಶಾಲೆಗಳು ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೋಧಿಸುತ್ತಿಲ್ಲ. ಇದಕ್ಕಾಗಿ ನಾವು ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಉಪನಿಷತ್ತುಗಳು ಮತ್ತು ಭಗವದ್ಗೀತೆಯ ಮೊರೆಹೋಗಬೇಕಾಗುತ್ತದೆ. ಅವುಗಳಲ್ಲಿನ ಬೋಧನೆಗಳು ಎಲ್ಲರಿಗೂ ಮುಕ್ತವಾಗಿ ದೊರಕುವಂಥವು. ಪಾಶ್ಚಾತ್ಯ ದೇಶಗಳಲ್ಲಿ ಜನರು ಭಾರತದ ಈ ತತ್ತ್ವಶಾಸ್ತ್ರದ ಮತ್ತು ಆಧ್ಯಾತ್ಮಿಕ ಪುಸ್ತಕಗಳಿಗಾಗಿ ಹಾತೊರೆಯುತ್ತಿದ್ದಾರೆ. ಅಮೆರಿಕ ಮತ್ತಿತರ ಪಾಶ್ಚಾತ್ಯ ದೇಶಗಳಲ್ಲಿ ನೀವು ಉಪನಿಷತ್ತುಗಳು ಅಥವಾ ಭಗವದ್ಗೀತೆಯನ್ನು ಕುರಿತು ಒಂದೇ ಒಂದು ಉಪನ್ಯಾಸ ಮಾಡಿದರೂ ಸಾಕು, ಮಾತುಗಳಲ್ಲಿ ವ್ಯಕ್ತಪಡಿಸಲಾಗದ ಕೃತಜ್ಞತಾಭಾವನೆಯಿಂದ ಕೇಳುಗರು ನಿಮಗೆ ನಮಸ್ಕಾರ ಮಾಡುತ್ತಾರೆ, ಡಾಲರುಗಳನ್ನು ನಿಮ್ಮ ಪಾದದಡಿ ತಂದಿಡುತ್ತಾರೆ. ನಾನು ಯೂರೋಪು, ಅಮೆರಿಕ ಮತ್ತು ಆಸ್ಟ್ರೇಲಿಯಾಗಳಲ್ಲಿ ಕಂಡದ್ದು ಇದನ್ನೇ. ನಮ್ಮ ಪರಂಪರೆಯಲ್ಲಿ ನಾವು ಅಗಣಿತವಾದ ಆಧ್ಯಾತ್ಮಿಕ ಜ್ಞಾನವನ್ನು ಹೊಂದಿದ್ದೇವೆ. ಆದರೆ ನಮ್ಮ ಜನಗಳಿಗೇ ಅದರಲ್ಲಿ ಆಸಕ್ತಿಯಿಲ್ಲ. ಎಂಥ ದುರಂತ ಇದು!

## ನೈಜ ಶಿಕ್ಷಣ

ಆದ್ದರಿಂದ, ಸ್ವಾಮಿ ವಿವೇಕಾನಂದರ ಈ ಬೋಧನೆಯನ್ನು ನೆನಪಿನಲ್ಲಿಡಿ: ನಮಗೆ ಬೇಕಾಗಿರುವುದು ಚಾರಿತ್ರ್ಯ ನಿರ್ಮಾಣದ, ರಾಷ್ಟ್ರ ನಿರ್ಮಾಣದ ಶಿಕ್ಷಣ. ಕೇವಲ ಉದ್ಯೋಗ ದೊರಕಿಸಿಕೊಡುವ ಶಿಕ್ಷಣವಲ್ಲ. ಈ ದಿಕ್ಕಿನಲ್ಲಿ ನೀವು ಮನಸ್ಸನ್ನು ಹರಿಸುವಿರೆಂದು ನಂಬಿದ್ದೇನೆ. ಮಹಾಭಾರತದಲ್ಲಿ ಬರುವ 'ಮಾನವ–ಶಕ್ತಿ'ಯ ವಿಭಾಗಗಳ ವಿಷಯವನ್ನು ನಿಮ್ಮ ಮುಂದೆ ಇಡಲು ಇಚ್ಛಿಸುತ್ತೇನೆ. ಪ್ರತಿಯೊಬ್ಬ ಮಾನವ ಜೀವಿಯಲ್ಲಿಯೂ ಮೂರು ಬಗೆಯ ಮಾನವಶಕ್ತಿ ಅಂತರ್ಗತವಾಗಿದೆ. ಮೊದಲನೆಯದನ್ನು **ಬಾಹುಬಲ** ಎಂದು ಕರೆ